ಮತ್ತೊಂದು ಸಾರಿ ಬರೆದು ಕಳುಹಿಸಿಕೊಡುವುದು ಒಳ್ಳೆಯದು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಅಪಘಾತ ತಡೆ ನಿರ್ವಹಣೆ.

262(3162)

ಶ್ರೀ ಸುಭಾಶ್ ಕಲ್ಲೂರ್(ಹುಮ್ನಾಬಾದ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆಯುವಂತಹ ರಸ್ತೆ ಅಪಘಾತಗಳನ್ನು ತಡೆಯಲು ಸರ್ಕಾರವು ಯಾವ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದೆ?

ಆ) ರಾಷ್ಟ್ರೀಯ ಹೆದ್ದಾರಿ ನಂ-9ರಲ್ಲಿ ಹುಮ್ನಾಬಾದ್ ಪಟ್ಟಣವು ಇರುವುದರಿಂದ ಈ ಜಾಗದಲ್ಲಿ ಪದೇ ಪದೇ ಅಪಘಾತಗಳು ನಡೆಯುವ ಬಗ್ಗೆ ವರದಿ ಬಂದಿದೆಯೇ?

ಇ) ಈ ಅಪಘಾತಗಳ ನಿವಾರಣೆಗಾಗಿ ಈ ರಸ್ತೆಯಲ್ಲಿ ಟ್ರಾಮಾ ಸೆಂಟರ್ ಹಾಗೂ ರಕ್ತ ನಿಧಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೆ? (ಏವರ ನೀಡುವುದು)

ಈ) ಹಾಗಿದ್ದಲ್ಲಿ ಈ ಕೇಂದ್ರಗಳನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು.

ಉ) ಇಂತಹ ಕೇಂದ್ರಗಳನ್ನು ರಾಜ್ಯದಲ್ಲಿ ಈಗಾಗಲೇ ಯಾವ ಯಾವ ಭಾಗಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಹಾಗೂ ರಾಷ್ಟ್ರೀಯ ಹೆದ್ದಾರಿ 9ರಲ್ಲಿ ಸದರಿ ಕೇಂದ್ರಗಳನ್ನು ಸ್ಥಾಪಿಸದಿರಲು ಕಾರಣವೇನು? ಏವರ ನೀಡುವುದು?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಚಾಲಕರಿಗೆ ಸ್ಪಷ್ಟವಾಗಿ ರಸ್ತೆ ತಿರುವು, ರಸ್ತೆ ಉಬ್ಬರ (ರಂಬಲ್ ಸ್ಟ್ರಿಪ್ಸ್) ಇತ್ಯಾದಿ ಬಗ್ಗೆ ಎಚ್ಚರಿಕೆ ಸೂಚನೆ ನೀಡುವ ''ಸೂಚನಾ ಫಲಕಗಳನ್ನು'' ಹಾಕಲಾಗಿದೆ.

2. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಕೆಲವು ಕಡೆ ಪದೇ ಪದೇ ಅಪಘಾತಗಳು ಆಗುತ್ತಿದ್ದು ಇಂತಹ ಜಾಗಗಳಿಗೆ ''ಕಪ್ಪು ಚುಕ್ಕೆ'' ಪ್ರದೇಶಗಳೆಂದು

ಗುರುತಿಸಿ, ಅಲ್ಲಿ ರಸ್ತೆಯನ್ನು ಅಗಲ ಮಾಡುವುದು, Rumble Strips ಹಾಕುವುದು ದೊಡ್ಡ ಮರಗಳ ಕೊಂಬೆಗಳನ್ನು ಕತ್ತರಿಸುವ ಮೂಲಕ ವಾಹನ ಚಾಲಕರಿಗೆ ರಸ್ತೆ ಸರಿಯಾಗಿ ಕಾಣುವಂತೆ ಮಾಡುವುದು. ವಗೈರೆ ಸುಧಾರಣೆಗಳನ್ನು ಮಾಡಲಾಗುತ್ತಿದೆ.

3. ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ಏರುದ್ಧ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

4. ಸಹಾಯಕ ಸಂಚಾರ ಠಾಣೆಗಳನ್ನು ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಅಪಘಾತಗಳನ್ನು ತಡೆಯಲು 11 ಸ್ಥಳಗಳಲ್ಲಿ ತೆರೆಯಲಾಗಿದೆ. ಇಲ್ಲಿನ ಪೋಲೀಸ್ ಸಿಬ್ಬಂದಿ ಹೆದ್ದಾರಿ ಗಸ್ತು (ಪೆಟ್ರೋಲಿಂಗ್) ಮಾಡಿ ವಾಹನ ಸಂಚಾರವನ್ನು ನಿಯಂತ್ರಿಸುತ್ತಾರೆ. ಈ ಎಲ್ಲಾ 11 ಠಾಣೆಗಳಿಗೆ ಅಂಬುಲೆನ್ಸ್ ವಾಹನಗಳನ್ನು ಒದಗಿಸಿದ್ದು, ಅಪಘಾತಗಳಾದಾಗ, ಗಾಯಾಳುಗಳನ್ನು ತ್ವರಿತವಾಗಿ ಹತ್ತಿರದ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಸಾಗಿಸಲಾಗುತ್ತಿದೆ.

5. ಆರೋಗ್ಯ ಇಲಾಖೆಯ ವತಿಯಿಂದ 44 ಸ್ಥಳಗಳಲ್ಲಿ ಟ್ರಾಮಾ ಸೆಂಟರ್‌ಗಳನ್ನು ತೆರೆಯುವ ಯೋಜನೆಯಿದ್ದು, ಬೀದರ್ ಜಿಲ್ಲೆಯಲ್ಲಿಯೂ ಸಹ ಟ್ರಾಮಾ ಸೆಂಟರ್ ತೆರೆಯುವ ಯೋಜನೆ ಇರುತ್ತದೆ.

6. ರಸ್ತೆ ಸುರಕ್ಷತೆ ನಿಯಮಗಳ ಬಗ್ಗೆ ತಿಳುವಳಿಕೆ ನೀಡಲು ಸಭೆಗಳ ಮೂಲಕ ಮತ್ತು ಕರಪತ್ರಗಳನ್ನು ಹಂಚುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದ ರಸ್ತೆ ಸುರಕ್ಷತ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ.

ಅ. ಹೌದು, ಈ ಸ್ಥಳದಲ್ಲಿ ಹುಮ್ನಾಬಾದ್ ಪಟ್ಟಣ ಇರುವ ರಾಷ್ಟ್ರೀಯ ಹೆದ್ದಾರಿ ನಂ.9ರ ಮೇಲೆ ಅಪಘಾತಗಳಾಗುತ್ತಿದ್ದು ಮುಂಜಾಗ್ರತಾ ಕ್ರಮವಾಗಿ ಸ್ಪೀಡ್ ಬ್ರೇಕರ್‌ಗಳನ್ನು ಅಳವಡಿಸಲಾಗಿದೆ. ನಿರ್ಲಕ್ಷ್ಯ ಹಾಗೂ ಅತಿ ವೇಗದಿಂದ ವಾಹನ ಓಡಿಸುವವರ ಏರುದ್ಧ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಅಪಘಾತ ವಲಯಗಳಲ್ಲಿ ಎಚ್ಚರಿಕೆ ನೀಡುವ ನಾಮ ಫಲಕಗಳನ್ನು ಹಾಕಲಾಗಿದೆ.

ಇ. ಹುಮನಾಬಾದ್ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ತೆರೆಯುವ ಯೋಜನೆ ಇದೆ.

ಈ. ಗುತ್ತಿಗೆ ಕರಾರಿನಂತೆ ಸೆಪ್ಟಂಬರ್ 2011ರ ತಿಂಗಳಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸಬೇಕಾಗಿದೆ. ನಂತರ ಟ್ರಾಮಾ ಕೇಂದ್ರವನ್ನು ಪ್ರಾರಂಭಗೊಳಿಸಲಾಗುವುದು.

ಉ. ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿ 50 ಕಿ.ಮೀ. ಅಂತ್ಯದಲ್ಲಿರುವ ಆಸ್ಪತ್ರೆಗಳಲ್ಲಿ ಒಟ್ಟು 44 ಟ್ರಾಮಾ ಕೇಂದ್ರಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ. (ಪಟ್ಟಿ ಲಗತ್ತಿಸಿದೆ.) ಈ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಲಾಗಿರುವ ರಕ್ತ ನಿಧಿ ಕೇಂದ್ರಗಳ ಪಟ್ಟಿಯನ್ನು ಲಗತ್ತಿಸಿದೆ.

Annexure

TRAUMA CENTRES under KHSDP

Sl. No.	Place	District	Stage of work
1.	Nelamangala	Bangalore(R)	Work completed.
2.	Ramanagara	Bangalore(R)	-do-
3.	Tarikere	Chickmagalure	-do-
4.	Haveri	Haveri	-do-
5.	Channarayapatna	Hassan	-do-
6.	Doddaballapura	Bangalore (R)	-do-
7.	Nippani	Belgaum	-do-
8.	Kolar	Kolar	-do-
9.	Mandya	Mandya	-do-
10.	Tumkur	Tumkur	-do-
11.	Belgaum	Belgaum	-do-
12.	Chitradurga	Chitradurga	-do-
13.	Davanagere	Chitradurga	-do-
14.	Hiriyur	Chitradurga	-do-
15.	Hubli	Dharwad	-do-
16.	Sakleshpur	Hassan	-do-

17.	Bijapur	Bijapur	Works under progress
18.	Chickamagalur	Chickmagalur	-do-
19.	Kundapura	D.K.	-do-
20.	Madikere	Kodagu	-do-
21.	Gundulpet	Mysore	-do-
22.	Kollegal	Mysore	-do-
23.	Sagar	Shimoga	-do-
24.	Shimoga	Shimoga	-do-
25.	Honavar	U.K.	-do-
26.	Sirsi	U.K.	-do-
27.	Hassan	Hassan	-do-
28.	Mangalore	D.K.	-do-
29.	Puttur	D.K.	-do-
30.	Karwar	U.K.	-do-
31.	Hunsur	Mysore	to be done.
32.	Hungund	Bijapur	Works to be taken up.
33.	Mysore	Mysore	Works to be taken up.
34.	Molkalmuru	Chitradurga	-do-

TRAUMA CENTRES UNDER Kfw

Sl. No.	Place	District	State of work
1.	Hospet	Bellary	Works under progress.
2.	Humnabad	Bidat	-do-
3.	Shahapur	Gulbarga	Works under progress
4.	Gangawati	Raichur	Works under progress
5.	Lingsugur	Raichur	Works under progress
6.	Sindhnur	Raichur	Works under progress (Located in Superintending)
7.	Raichur	Raichur	Hospital (OPEC)
8.	Bellary	Bellary	Works to be taken up
9.	Bidar	Bidar	-do-
10.	Gulbarga	Gulbarga	-do-

STATEMENT OF BLOOD BANK BUILDINGS COMMING UNDER KHSDP

Sl. No.	Location	Discription of Blood Bank buildings proposed for improvements and new constructions.
I.		**Improvements and new construction taken up by the KHSDP.**
1.	DH Mandya	Renovation of blood bank Building at Mandya.
2.	DH Shimoga	Improvements to blood bank in the premises of MC-Gann hospital at Shimoga.
3.	DH Kolar	-do- in the premises of SNR Hospital at Kolar
4.	D.H.Tumkur	-do- in the premises of DH at Tumkur.
5.	DH Chicka-magalure	Urgent repairs to blood bank buildings in the premises of Maternity hospital at chikkamagalur.
6.	DH Madikeri	Addition & alteration to existing buildings to create blood bank at DH at Madikeri in Kodagu district.
7.	DH Belgaum	Renovation to blood Bank in the premises of DH at Belgaum.
8.	DH Bijapur	-do- of DH at Bijapur

Estimated cost in lakhs.	Expenditure up to the end of De. 2000	Remarks
5.90	5.90	Work completed.
2.08	-	-do-
0.95	-	-do-
0.34	0.34	-do-
4.44	-	-do-
2.90	-	-do-
1.50	-	-do-
1.95	-	-do-

9.	HSIS B;lore	Construction of blood bank Building at HSIS hospital premises, Shivajinagar, Bangalore.
10.	SDH Sirsi	Improvements to blood bank of SDH Sirsi in U.K. District.
11.	DH Karwar	Improvements to blood bank at H.H. Karwar.
12.	SDH Jamakhandi	Providing blood bank facilities to SDH at Jamakhandi
		Total

II. Construction completed by PWD

13.	Wenlock Hospital Mangalore.	Works completed by PWD
14.	DH Chitradurga	Works completed by PWD
15.	DH Hassan	Works completed by PWD
16.	DH Mysore	Works completed by PWD
17.	SDH Udupi	Works completed by PWD

III. Improvements and new construction works proposed to take up in the main estimate of Renovation and Expansion of Hospital.

18.	SDH Haveri	Works proposed to take up in the main estimate of Renovation of Hospitals.

13.00	13.58	-do-
5.00	5.54	(Temporary arrangements)
2.10	-	-do-
4.49	14.47	-do-
44.65		

To be discussed with Deputy Chief Architect.

19.	SDH Kollegal	-do-
20.	SDH Davanagere	-do-
21.	SDH Hiriyur	-do-
22.	SDH Viarjpet	-do-
23.	SDH Sagar	-do-
24.	SDH Gadag	-d0-
25.	SDH Puttur	-do-
26.	SDH Bagalkote	-do-
27.	DH Dharwad	-do-

Regarding Blood Bank buildings at the new District Head Quarters, Chamarajanagar, Koppal proposals are under preparation.

ABSTRACT

1.	Completed by the KHSDF	12
2.	Completed by PWD	5
3.	Works taken up in the Main estimate	7
4.	Works proposed in the main Estimate and yet to be started.	2
5.	Old blood bank retained	1
	Total	27

(under progress)

Completed.

Completed.

Under Progress

Under Progress

To be located in new District Hospital.

Under progress

Under progress

Old Blood bank is to be retained.

LIST OF BLOOD BANKS INCLUDED UNDER Kfw

Sl. No.	Place	District	Type of Hospital	Existing beds
1.	Bellary	Bellary	DH	512
2.	Hospet	Bellary	SDH	100
3.	Bidar	Bidar	DH	283
4.	Gulbarga	Gulbarga	DH	700
5.	Yadgir	Gulbarga	SDH	30
6.	Lingasugur	Raichur	SDH	30
7.	Raichur	Raichur	DH	250

Proposed beds	Remarks
512	Existing in Women and Child Hospital to be renovated.
100	Works started now.
400	Included in the estimate now.
700	-do-
100	Tenders for main work approved (included in the main work)
100	-do-
400	Existing in OPEC buildings.

ಶ್ರೀ ಸುಭಾಷ್ ಕಲ್ಲೂರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ನನ್ನ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರಿಸಿದ್ದಾರೆ, ಆದರೆ ನಾನು ಕೇಳಿದ ಪ್ರಮುಖವಾದ ಪ್ರಶ್ನೆಗೆ ಸರಿಯಾದ ಉತ್ತರ ನನಗೆ ಬಂದಿಲ್ಲ. ನನ್ನ ಕ್ಷೇತ್ರದಲ್ಲಿ ಬರುವ ಹುಮ್ನಾಬಾದ್ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ-9 ಇದ್ದು, ಇದು ಮುಂಬೈ ಹಾಗೂ ಹೈದರಾಬಾದ್ ರಸ್ತೆಯಾಗಿದೆ, ಅಲ್ಲಿ ಪದೇ ಪದೇ ಅಪಘಾತಗಳು ಬಹಳ ಆಗುತ್ತಿರುತ್ತದೆ. ತಮಗೆ ಗೊತ್ತಿರುವಂತೆ ಒಂದು ವರ್ಷದಿಂದ ಅಪಘಾತದಿಂದ ನೂರೂರು ಜನರು ಸತ್ತರು, ಸಾಕಷ್ಟು ಜನರಿಗೆ ಗಾಯಗಳಾದವು, ಅಪಘಾತಕ್ಕೆ ಒಳಗಾದವರನ್ನು ಆಸ್ಪತ್ರೆಗೆ ತೆಗೆದುಕೊಂಡು ಬರುವಂತಹ ಹಾದಿಯಲ್ಲೇ ಎಷ್ಟೋ ಜನರು ಸತ್ತುಹೋದ ಉದಾಹರಣೆಗಳಿವೆ. ಅಲ್ಲಿ ಒಂದು ಟ್ರಾಮಾ ಸೆಂಟರ್ ಹಾಗೂ ಬ್ಲಡ್ ಬ್ಯಾಂಕ್ ತೆರೆಯಬೇಕೆಂಬುದು ನನ್ನ ಕೋರಿಕೆಯಾಗಿದೆ. ತಾವು ಉತ್ತರ ಕೊಡುವಾಗ ಅಲ್ಲಿ ಒಂದು ಟ್ರಾಮಾ ಸೆಂಟರ್ ಅನ್ನೂ ಕೂಡ ತೆರೆಯುವ ಉದ್ದೇಶವಿದೆ ಎಂದು ಹೇಳಿದಿರಿ ಅದು ಬಹಳ ಸಂತೋಷದ ಸಂಗತಿ, ಆದರೆ ಒಂದು ಬ್ಲಡ್ ಬ್ಯಾಂಕ್ ಅನ್ನು ಸಹ ಅಲ್ಲಿ ತೆರೆಯುವುದರ ಬಗ್ಗೆ ಉತ್ತರದಲ್ಲಿ ಉಲ್ಲೇಖವಾಗಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಕೂಡ ಸದನದಲ್ಲಿದ್ದಾರೆ, ಅಲ್ಲಿ ಟ್ರಾಮಾ ಸೆಂಟರ್ ಜೊತೆಗೆ ಒಂದು ಬ್ಲಡ್ ಬ್ಯಾಂಕ್ ಅನ್ನು ತೆರೆಯುವುದೂ ಕೂಡ ಅಷ್ಟೇ ಅವಶ್ಯಕತೆ ಇದೆ. ಅಲ್ಲಿ ಯಾವಾಗಲೂ ಅಪಘಾತಗಳಾಗುತ್ತಿರುತ್ತವೆ, ಅಪಘಾತಕ್ಕೆ ಒಳಗಾದ ಜನರನ್ನು ಆಸ್ಪತ್ರೆಗೆ ತೆಗೆದುಕೊಂಡು ಬರುವ ಹಾದಿಯಲ್ಲೇ ಸಾಕಷ್ಟು ಸತ್ತು ಹೋಗುವ ಉದಾಹರಣೆಗಳು ಬಹಳ ಇವೆ. ಅಪಘಾತವನ್ನು ತಡೆಗಟ್ಟಲು ರಸ್ತೆಯ ಪಕ್ಕದಲ್ಲಿರುವ ಗಿಡಗಳನ್ನು ಕ್ಲಿಯರ್ ಮಾಡುವುದು ಇತ್ಯಾದಿ ಕೆಲಸಗಳು ಬಹಳ ಮುಖ್ಯವಲ್ಲ, ಅಲ್ಲಿರುವುದು ಸಾವುನೋವಿನ ಪ್ರಶ್ನೆ, ಆ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ-9 ಇರುವ ನಮ್ಮ ಪಟ್ಟಣಕ್ಕೆ ತಾವು ಒಂದು ಟ್ರಾಮಾ ಸೆಂಟರ್ ಹಾಗೂ ಬ್ಲಡ್ ಬ್ಯಾಂಕ್ ಈ ಎರಡನ್ನೂ ಕೂಡ ಒದಗಿಸಿಕೊಡುವುದು. ಟ್ರಾಮಾ ಸೆಂಟರ್ ಬಗ್ಗೆ ಈಗಾಗಲೇ ಹೇಳಿದ್ದೀರಿ, ಆದರೆ ಬ್ಲಡ್ ಬ್ಯಾಂಕ್ ಕೂಡ ಆಗಬೇಕೆಂಬುದು ನನ್ನ ಕಳಕಳಿಯಾಗಿದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ 44 ಟ್ರಾಮಾ ಸೆಂಟರ್‌ಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆ, ಈಗಾಗಲೇ ಇದರಲ್ಲಿ 12 ಟ್ರಾಮಾ ಸೆಂಟರ್ ಕಟ್ಟಡಗಳನ್ನು ಕೆಹೆಚ್ಎಸ್‌ಡಿಪಿ ಈ ಯೋಜನೆಯಡಿಯಲ್ಲಿ ತೆಗೆದುಕೊಂಡಿದ್ದೇವೆ. 12 ಟ್ರಾಮಾ ಕೇರ್ ಸೆಂಟರ್‌ಗಳ ಕಟ್ಟಡದ ಕೆಲಸ ಸಂಪೂರ್ಣವಾಗಿ ಆಗಿದೆ. ಹುಮ್ನಾಬಾದ್‌ನ ರಾಷ್ಟ್ರೀಯ ಹೆದ್ದಾರಿ-9ರಲ್ಲಿ ಈ ಟ್ರಾಮಾ ಸೆಂಟರ್ ತೆರೆಯುವ ಯೋಜನೆ ಸರ್ಕಾರದ ಮುಂದಿದೆ, ಇದರ ಕಾಮಗಾರಿಯನ್ನು ತಕ್ಷಣವೇ ಪ್ರಾರಂಭ ಆಗುವಂತೆ ತೀರ್ಮಾನ ಮಾಡುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ಬ್ಲಡ್ ಬ್ಯಾಂಕ್ ಒಂದನ್ನೂ ಕೂಡ ತೆರೆಯಬೇಕೆಂದು ಸೂಚನೆ

ಮಾಡಿದ್ದಾರೆ, ಟ್ರಾಮಾ ಸೆಂಟರ್ ಪ್ರಾರಂಭವಾದ ತಕ್ಷಣವೇ ಈ ಬ್ಲಡ್ ಬ್ಯಾಂಕ್ ಅನ್ನೂ ಕೂಡ ಆ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಆರಂಭ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಧಾರವಾಡ ನಗರದಲ್ಲಿ ಸರ್ಕಾರಿ ಮಹಾವಿದ್ಯಾಲಯ ಸ್ಥಾಪಿಸುವುದು.

282(3362)

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರ ಕರ್ನಾಟಕದ ಒಂದು ಪ್ರತಿಷ್ಠಿತ ನಗರವಾಗಿದ್ದು ಒಂದು ಪೂರ್ಣ ಪ್ರಮಾಣದ ಸರ್ಕಾರಿ ಮಹಾವಿದ್ಯಾಲಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಧಾರವಾಡದಲ್ಲಿಯ ಖಾಸಗಿ ಸಂಸ್ಥೆಗಳಿಂದ ಬಡ ಜನತೆಯ ಮಕ್ಕಳಿಗೆ ಡೊನೇಷನ್ ಹಾವಳಿಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಾದರೆ ಬೆಳೆಯುತ್ತಿರುವ ಮಹಾನಗರದಲ್ಲಿ ಎಷ್ಟು ಪೂರ್ಣ ಪ್ರಮಾಣದ ಮಹಾವಿದ್ಯಾಲಯ ನೀಡಲಾಗುವುದು?

ಡಾ॥ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ಹೌದು

ಆ) ಇಲ್ಲ

ಇ) ಹುಬ್ಬಳ್ಳಿ-ಧಾರವಾಡದಲ್ಲಿ ಬಿ.ಎ. ಮತ್ತು ಬಿ.ಕಾಂ. ಕೋರ್ಸುಗಳೊಂದಿಗೆ ಸರ್ಕಾರಿ ಕಾಲೇಜನ್ನು ಈಗಾಗಲೇ ಸ್ಥಾಪಿಸಲಾಗಿದೆ.

ಶ್ರೀ ಚಂದ್ರಕಾಂತ್ ಬೆಲ್ಲದ್ ಗುರಪ್ಪ: ಶಿಕ್ಷಣ ಕೇಂದ್ರವಾದ ಧಾರವಾಡದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳಿದ್ದಾರೆ. ಅಲ್ಲಿ ಪೂರ್ಣ ಪ್ರಮಾಣದ ಸರ್ಕಾರಿ ಮಹಾವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಬಹಳ ದಿವಸಗಳಿಂದ ನಾನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಇಲ್ಲಿಗೆ ಕಾಲೇಜನ್ನು ಮಂಜೂರು ಮಾಡಬೇಕೆಂದು